ಜನ ಊಟ ಮಾಡಬಹುದಿತ್ತು. ಪಕ್ಕದಲ್ಲೇ ಬಚ್ಚಲು. ನಡುಮನೆಯಲ್ಲೊಂದು ಕಟ್ಟಿಗೆಯ ಅಟ್ಟ. ಏರಿದರೆ ಒಂದು ಕೋಣೆ ಇತ್ತು. ಅದನ್ನು ಮನೆಯ ಹಿರಿಯ ಮಗ ಗುರುರಾಜ... ಗುರಣ್ಣ ಬಳಸುತ್ತಿದ್ದ. ಅಪ್ಪ ತಹಶೀಲ್ದಾರ ಕಚೇರಿಯಲ್ಲಿ ಗುಮಾಸ್ತರಾಗಿದ್ದರು. ನಾನು ಐದು ವರ್ಷದವಳಿರುವಾಗಲೇ ಮನೆ ಕೊಂಡುಕೊಂಡದ್ದಂತೆ. ಮನೆಯಲ್ಲಿ ನಾಲ್ಕು ಜನರೊಂದಿಗೆ ಇಂಚಿಂಚಾಗಿ ತೀರುತ್ತಿದ್ದ ಸಾಲವೂ ವಾಸಿಸುತ್ತಿತ್ತು.

ನಾನಿನ್ನೂ ಏಳನೇ ತರಗತಿಯಲ್ಲಿದ್ದಾಗ ಪಕ್ಕದ ಮನೆಗೆ ಹೊಸ ಬಿಡಾರ ಬಂದಿತ್ತು. ಅದೂ ನಮ್ಮ ಮನೆಯ ತದ್ರೂಪು. ಇಷ್ಟು ದಿನ ಬಾಡಿಗೆ ಕೊಟ್ಟ ಮಾಲೀಕರು ಈಗ ತಾವೇ ಇರಲು ಬಂದಿದ್ದರು. “ಮನಿ ಅಂತಾರೇನ್ರಿ ಇದಕ್ಕ... ಗುಬ್ಬಿ ಗೂಡಿದ್ಧಂಗ ಅದರೆಪಾ. ಏನೋ... ಹಳೇ ಮಂದಿ ತೊಗೊಂಡು ಇಟ್ಟಾರಂತ ಸ್ವಲ್ಪ ದಿವಸ ಇರೋದು... ಆಮ್ಯಾಲೆ ಬಾಡಿಗಿ ಕೊಟ್ಟು ಬ್ಯಾರೇ ಧೊಡ್ಡ ಮನಿಗೆ ಹೋಗಿಬಿಡೋದು. ಅಣ್ಣಿಗೇರ್ಯಾಗ ನಮ್ಮು ಬೇಕಾದಷ್ಟು ಬೆಣ್ಣೆಯಂಥಾ ಹೊಲಾ ಅವರಿ. ಒಂದ ಹೊಲಾ ಮಾರಿದ್ರ ಇಲ್ಲೇ ಕೇಶ್ವಾಪೂರ, ವಿದ್ಯಾನಗರದಂಥಾ ಎಕ್ಸ್‌ಟೆನ್ಷನ್ ಏರಿಯಾದಾಗ ಒಂದು ಛಂದನ್ನ ಮನಿ ತೊಗೊಬಹುದು. ಅಣ್ಣಿಗೇರಿ ಪಾಟೀಲ್ರು ನಾವು...” ಎಂದು ಕೊರೆದಿದ್ದೇ ಕೊರೆದಿದ್ದು. ಒಂದಾಗಿ ಎರಡನೇ ಕಪ್ ಚಹಾದ ಜೊತೆ ಅವಲಕ್ಕಿಯ ಉಪಚಾರವೂ ಆಗಿತ್ತು. ಬಾಬೂರಾವ್ ಪೋಸ್ಟ್ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದರು. ಧರ್ಮಪತ್ನಿ ಸರೋಜಾಬಾಯಿಯದು ತದ್‌ವಿರುದ್ಧದ ಸ್ವಭಾವ. ಅಷ್ಟೇ ಸೌಮ್ಯ ಶಾಂತ ವರ್ತನೆ. ಅಮ್ಮ ಅವರಿಗೆ ಕುಂಕುಮ ಕೊಡುತ್ತ, “ಬ್ಯಾರೇ ಧೊಡ್ಡ ಮನಿ ತೊಗೊತೀರೆಂತ. ಎಲ್ಲಿ ನೋಡೀರೇನು?” ಎಂದು ಮೊದಲ ದಿನವೇ ಕೇಳಿದ್ದಳು. “ಹ್ಞ... ಹ್ಞ...” ಎಂದು ಸಣ್ಣಗೆ ನಕ್ಕರವರು. “ಅವರು ಹೇಳ್ತಿರ್ತಾರ. ನಾವು ಕೇಳ್ತಿರೋದು. ಎಲ್ಲಿ ಮನಿ ತೊಗೋತೀರಿ? ನಾಲ್ಕು ಮಕ್ಕಳು ಪದರಾಗ... ಸುಮತಿ... ವಸುಮತಿ... ರವಿಕಾಂತ... ಚಂದ್ರಕಾಂತ. ಎಲ್ಲಾ ಹುಡುಗುರ ಶಿಕ್ಷಣ ಆಗಬೇಕು. ಹೆಣಮಕ್ಕಳು ಧೊಡ್ಡಾವ್ರಾಗ್ಯಾರ. ವರಾ ನೋಡಬೇಕು. ಅದಕ್ಕ ಧೊಡ್ಡೂರಿಗೆ ಟ್ರಾನ್ಸಫರ್ ಕೇಳಿಕೊಂಡು ಬಂದೇವಿ” ಎಂದು ಪ್ರಾಮಾಣಿಕವಾಗಿ ಉತ್ತರಿಸಿದ್ದರು. ಅಂದಿನಿಂದಲೇ ನಮ್ಮ ಕುಟುಂಬಕ್ಕೆ ಆಪ್ತರಾದರು.

ಸರಜಕ್ಕನದು ಮಟ್ಟಸವಾದ ಎತ್ತರ, ನಿಂಬೆಯ ಬಣ್ಣ, ಚೂಪು ಮೂಗು. ಜೀವನದ ಕಷ್ಟನಷ್ಟಗಳಲ್ಲಿ ನೊಂದು ಬೆಂದಿದ್ದರೂ ಚೆಲುವು ಮಾಸಿರಲಿಲ್ಲ. ಎರಡನೇಯವಳು ವಸುಮತಿ ಮತ್ತು ರವಿಕಾಂತ ಥೇಟ್ ಅಮ್ಮನಂತೆಯೇ. ರೂಪಿನಲ್ಲಿ, ನಡೆನುಡಿಯಲ್ಲಿ ಶಾಂತ, ತಿಳಿವಳಿಕಸ್ಥರು. ದೊಡ್ಡವಳು ಸುಮತಿ ಮತ್ತು ಕೊನೆಯವ ಚಂದ್ರಕಾಂತ ಅಪ್ಪನ ಮುಖಲಕ್ಷಣ, ಗುಣ ಮತ್ತು ವಾಚಾಳಿ ಸ್ವಭಾವವನ್ನು ಬಳುವಳಿಯಾಗಿ ಪಡೆದಿದ್ದರು. ಮೊದಲ ಭೇಟಿಯಲ್ಲೇ ಬಾಬೂರಾವ್‌ರನ್ನು ಅಳೆದ ಅಪ್ಪ, “ಒಣಾ ಧೊಡ್ಡಿಸ್ತನಾನ ಭಾಳು” ಎಂದು ದೂರವೇ ಇಟ್ಟರು. ಉಳಿದವರ ಹೊಕ್ಕುಬಳಕೆ ಮಾಮೂಲಾಯಿತು. ಸುಮತಿ ಕಾಲೇಜು ಮುಗಿಸಿದ್ದರೆ ವಸುಮತಿ ಬಿ.ಎ. ಓದಲು ಕಾಡಸಿದ್ಧೇಶ್ವರ ಕಾಲೇಜು ಸೇರಿದಳು. ರವಿಕಾಂತ ಗುರಣ್ಣನೊಂದಿಗೆ ಕೊತಂಬ್ರಿ ಸೈನ್ಸ್ ಕಾಲೇಜು ಸೇರಿದ. ಚಂದ್ರು ಡಿಪ್ಲೊಮಾಕ್ಕೆ ಕಾಲಿಟ್ಟಿದ್ದ. ಕೆಲವೇ ದಿನಗಳಲ್ಲಿ ಸರಜಕ್ಕ ಅಮ್ಮನ ಆಪ್ತವಲಯದಲ್ಲಿ ಗುರುತಿಸಲ್ಪಟ್ಟರು. ಹಪ್ಪಳ, ಸಂಡಿಗೆ, ಶ್ಯಾವಿಗೆ... ಎಲ್ಲಕ್ಕೂ ಜೊತೆಯಾದರು. ಅಮ್ಮನೊಬ್ಬಳೇ ಅಲ್ಲ, ಎರಡು ಬೀದಿಗಳ ಜನ ಅವರಿಂದ ಪ್ರಭಾವಿತರಾದದ್ದು ಸುಳ್ಳಲ್ಲ. ಎಲ್ಲಕ್ಕೂ ಅವರ ಬಳಿ ವಿಶೇಷ ಟಿಪ್ಪಣಿಗಳಿರುತ್ತಿದ್ದವು. “ಸರಜಕ್ಕ ನೋಡ್ರಿ... ಅವಲಕ್ಕಿ ಹಿಟ್ಟನಿಂದ ಗಂಜಿ ತಗದು ಎಷ್ಟ ಛೊಲೊ ಸಂಡಿಗಿ ಮಾಡ್ತಾರ. ಹೌರಗ ಆಗ್ತಾವ. ಅವಲಕ್ಕಿ ಹಿಟ್ಟಲೇನ ಶ್ಯಾವಿಗಿ ಸಂಡಿಗಿಗತೆ ಇಡ್ತಾರ. ಕುರೋಡಿಗಿ ಅಂತ... ಶ್ಯಾವಿಗಿ ಸುದ್ಧಾ ಕೈಮ್ಯಾಲೆ ತೊಗೊಂಡು... ಸುತ್ತಿ ಎರಡು ಮಿನಟು ಇಟ್ಟುಬಿಡ್ತಾರ. ಆಮ್ಯಾಲೆ ಕೋಲ ಮ್ಯಾಲೆ ಹಾಕಿ ಎಳಿ ಬಿಡಸ್ತಾರ. ಏನ ಛಂದ ಸಣ್ಣ ಎಳಿ ಬರ್ತಾವಂದಿರಿ...” ಎಂದು ಅಮ್ಮ ಅಪ್ಪನ ಮುಂದೆ ವರ್ಣಿಸಿದ್ದೇ